# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1783 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 14.03.2022 |
| ಉತ್ತರಿಸುವ ಸಚಿವರು | : | ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು. |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ತೂಕದ ಯಂತ್ರಗಳನ್ನು ಮೋಸ ಮಾಡಲು ಅನುವಾಗುವಂತೆ ಪರಿವರ್ತಿಸುತ್ತಿರುವ ವ್ಯಾಪಾರಿಗಳ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ಅಂಕಿ - ಅಂಶ ಸಹಿತ ಮಾಹಿತಿ ಒದಗಿಸುವುದು)</td><td>ಕಾನೂನು ಮಾಪನಶಾಸ್ತ್ರ ಕಾಯ್ದೆ 2009 ಹಾಗೂ ಕಾನೂನು ಮಾಪನಶಾಸ್ತ್ರ ನಿಯಮಗಳನುಸಾರ ತೂಕದ ಯಂತ್ರಗಳನ್ನು ಮೋಸ ಮಾಡಲು ಅನುವಾಗುವಂತೆ ಪರಿವರ್ತಿಸುವ ವ್ಯಾಪಾರಿಗಳ ವಿರುದ್ಧ ಪ್ರಕರಣವನ್ನು ದಾಖಲಿಸಿ ಶಿಕ್ಷಿಸಲು ಅವಕಾಶವನ್ನು ಕಲ್ಪಿಸಲಾಗಿದೆ.<br><br>ಕಾನೂನು ಮಾಪನಶಾಸ್ತ್ರ ಕಾಯಿದೆಯ Section 26ರನ್ವಯ ತೂಕಗಳು/ಅಳತೆಗಳು/ತೂಕದ ಯಂತ್ರಗಳನ್ನು ವಂಚನೆ ಹಾಗೂ ಮೋಸ ಮಾಡುವಂತೆ ಬದಲಾಯಿಸಿ ಉಪಯೋಗಿಸುತ್ತಿರುವ ವ್ಯಾಪಾರಸ್ಥರ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಹೂಡಲಾಗುತ್ತಿದೆ. ಕಳೆದ ಎರಡು ವರ್ಷಗಳಲ್ಲಿ ದಾಖಲಿಸಿರುವ ಪ್ರಕರಣಗಳ ಮಾಹಿತಿ ಈ ಕೆಳಕಂಡಂತಿದೆ.
<table>
<tr><th>ಕೈಗೊಳ್ಳಲಾದ ತಪಾಸಣೆ ಸಂಖ್ಯೆ</th><th>ಹೂಡಲಾದ ಮೊಕದ್ದಮೆಗಳ ಸಂಖ್ಯೆ</th><th>ವಸೂಲಿ ಮಾಡಲಾದ ದಂಡ</th><th>ದಾಖಲಿಸಿರುವ ಪ್ರಕರಣಗಳ ವಿವರ</th></tr>
<tr><td>18</td><td>18</td><td>4,31,000</td><td>10 ಪ್ರಕರಣಗಳಿಗೆ ಸಂಬಂಧಿಸಿದಂತೆ ಪೋಲೀಸ್ ಠಾಣೆಗಳಲ್ಲಿ ದೂರನ್ನು ದಾಖಲಿಸಲಾಗಿರುತ್ತದೆ. 8 ಪ್ರಕರಣಗಳಲ್ಲಿ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿ ಮೊಕದ್ದಮೆಯನ್ನು ಹೂಡಲಾಗಿದೆ</td></tr>
</table>
</td></tr>
</table>

| | | |
|---|---|---|
| (ಆ) | ಯಾವ ಯಾವ ವಸ್ತುಗಳ ತೂಕವನ್ನು ಯಾವ ರೀತಿ ಮೋಸ ಮಾಡಲಾಗುತ್ತಿದೆ; ಇದಕ್ಕೆ ಅನುಸರಿಸುತ್ತಿರುವ ವಿಧಿ-ವಿಧಾನಗಳೇನು; (ವಸ್ತುವಾರು ವಿವರ ಒದಗಿಸುವುದು) | ಈ ಕೆಳಕಂಡಂತೆ ತೂಕಗಳಲ್ಲಿ ವ್ಯತ್ಯಾಸವನ್ನು ಮಾಡಿ ಮೋಸ ಮಾಡುತ್ತಿರುವುದು ಕಂಡು ಬಂದಿರುತ್ತದೆ.<br>• ನ್ಯಾಯಬೆಲೆ ಅಂಗಡಿ ಹಾಗೂ ದಿನಸಿ ಅಂಗಡಿಗಳಲ್ಲಿ ಟೇರ್ ವೇಟ್‌ನ್ನು ತೆಗೆಯದೇ ಅಥವಾ ತೂಕವನ್ನು ಮಾಡಲು ಬಳಸುವ ಖಾಲಿ ಡಬ್ಬದ ತೂಕವನ್ನು ಕಳೆಯದೆ ವಂಚನೆ ಮಾಡಲಾಗುತ್ತಿದೆ.<br>• ಸ್ವಿಚ್ ರಿಮೋಟ್ ಬಳಸಿ ಐರನ್ ಮತ್ತು ಸ್ಟೀಲ್ ಮಾರಾಟ ಅಂಗಡಿಗಳು, ಮಟನ್ ಶಾಪ್‌ಗಳು, ಸ್ಕ್ರಾಪ್ ಮತ್ತು ಹಳೇ ಪೇಪರ್ ಅಂಗಡಿಗಳಲ್ಲಿ ವಂಚನೆ ಮಾಡಲಾಗುತ್ತಿದೆ.<br>• ಎಪಿಎಂಸಿ ಯಾರ್ಡ್ ಮತ್ತು ಈರುಳ್ಳಿ ಮಂಡಿಯಲ್ಲಿ ರೈತರ ಸಂತೆಗಳಲ್ಲಿ ಸ್ವಿಚ್ ಬಳಸಿ ರೈತರಿಗೆ ಮೋಸ ಮಾಡುತ್ತಿರುವುದು ಕಂಡು ಬಂದಿರುತ್ತದೆ.<br>• ಪೆಟ್ರೋಲ್ ಬಂಕ್ ಗಳಲ್ಲಿ Integrated Circuit (IC)ಬಳಸಿ ಕಡಿಮೆ ಪ್ರಮಾಣದ ವಿತರಣೆಯನ್ನು ಮಾಡಿ ವಂಚನೆ ಮಾಡಲಾಗುತ್ತಿದೆ. |
| (ಇ) | ಅಳತೆ- ತೂಕ- ಗುಣಮಟ್ಟದ ಮೋಸದಿಂದ ಗ್ರಾಹಕರಿಗೆ ಆಗುತ್ತಿರುವ ಅನ್ಯಾಯಗಳನ್ನು ತಡೆಗಟ್ಟಲು ಸರ್ಕಾರ ಕಳೆದ 2 ವರ್ಷಗಳಿಂದ ಕೈಗೆದುಕೊಂಡಿರುವ ಕ್ರಮಗಳೇನು; | ಅಂಶ "ಆ" ರಲ್ಲಿ ವಿವರಿಸಿರುವಂತೆ ಕ್ರಮವಹಿಸಲಾಗುತ್ತಿದೆ. |
| ಈ) | ಆರೋಗ್ಯಕ್ಕೆ ಹಾನಿಕಾರವೆಂದು ತಿಳಿದಿದ್ದು, ಅಂತಹ ವಸ್ತುಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದನ್ನು ನಿರ್ಬಂಧಿಸಲು ಆಹಾರ ವಸ್ತುಗಳಿಗೆ ಪ್ರಸ್ತುತದಲ್ಲಿ ಇರುವ ನಿಯಮಗಳನ್ನು ಮತ್ತಷ್ಟು ಮಾರ್ಪಾಡಿಸಿ ಸಲಹೆ ನೀಡಲು; ಈ ಕ್ಷೇತ್ರದ ತಜ್ಞರ ಸಮಿತಿ ರಚಿಸುವ ಬಗ್ಗೆ ಸರ್ಕಾರದ ನೀತಿ ನಿಯಮಗಳೇನು? | ಆಹಾರ ಸುರಕ್ಷತೆ ಮತ್ತು ಗುಣಮಟ್ಟಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ನ್ನು ಜಾರಿಗೆ ತಂದಿರುತ್ತದೆ. ಸದರಿ ಕಾಯ್ದೆಯನ್ವಯ ಅಗತ್ಯ ಕ್ರಮವಹಿಸಲಾಗುತ್ತಿದೆ. |

ಆನಾಸ 38 ಕಾಮಾಸೇ 2022 (ಇ-ಆಫೀಸ್)

(ಉಮೇಶ್ ವಿ.ಕತ್ತಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.